


**ಹದಿನಾಲ್ಕು ವರ್ಷದ ವಿಶಾಲ್‌ಗೆ ಐದು ಬೆರಳಿನಿಂದ ಅನ್ನ ತುತ್ತು ಮಾಡುವುದನ್ನೂ ಕಲಿಸಬೇಕು. ಅದರ ಜೊತೆಗೆ ಅಕ್ಷರ, ಓಡಾಟವನ್ನು ಅಭ್ಯಾಸ ಮಾಡಿಸಬೇಕು.**

ಸಜ್ಜನರಾವ್ ವೃತ್ತದ ಬಳಿ ಇರುವ 'ವಿದ್ಯಾಸಂಸ್ಥೆ'ಗೆ ಎಂಟು ವರ್ಷದಿಂದ ಹೋಗುತ್ತಿದ್ದಾನೆ. ಅದು ಸಾಮಾನ್ಯ ಶಾಲೆ ಆದರೂ ವಿಶೇಷ ಮಕ್ಕಳ ಕಾಳಜಿಯನ್ನೂ ಅಲ್ಲಿ ಮಾಡುತ್ತಾರೆ. ಅವನಿಗೆ ಪ್ರಧಾನವಾಗಿ ಫಿಸಿಯೊಥೆರಪಿಯನ್ನು ಮಾಡುತ್ತಾರೆ. ಕಲರ್ಸ್ ಗುರುತಿಸುವುದನ್ನು ಹೇಳಿಕೊಡುತ್ತಾರೆ. ವೈದ್ಯರೂ ಫಿಸಿಯೊಥೆರಪಿ ಜಾಸ್ತಿ ಮಾಡಿಸಬೇಕು ಎನ್ನುವ ಸಲಹೆಯನ್ನು ನೀಡಿದ್ದಾರೆ. ಪೋಷಕರಾದ ನಾವು ಹೇಳಿದ್ದನ್ನು ಅವನು ಪಾಲಿಸುವುದಿಲ್ಲ. ಅವನಿಗೆ ಇಷ್ಟ ಬಂದರೆ ಮಾತ್ರ ಮಾಡುತ್ತಾನೆ.

ಶಾಲೆಯಲ್ಲಿ ಶಿಕ್ಷಕರು, ವೈದ್ಯರು ಹೇಳಿದ ಚಟುವಟಿಕೆಗಳನ್ನು ಸಾಧ್ಯವಾದ ಮಟ್ಟಿಗೆ ಪಾಲಿಸುತ್ತಾನೆ. ಅವರ ಬಳಿ ಹಟ ಮಾಡುವುದಿಲ್ಲ. ಶಾಲೆಯಲ್ಲಿ ಕೌಶಲವನ್ನು ಕಲಿಸುತ್ತಿದ್ದಾರೆ. ಹೇಳಿದ ವಸ್ತುಗಳನ್ನು ಎತ್ತಿಕೊಡುತ್ತಾನೆ. ಊಟ ಮಾಡಲು ಅವನಿಗೆ ತುತ್ತನ್ನು ಐದೂ ಬೆರಳಿನಿಂದ ಹಿಡಿಯಲು ಬರುವುದಿಲ್ಲ. ಎರಡು ಬೆರಳನ್ನು ಮಾತ್ರ ಬಳಸುತ್ತಾನೆ. ಆ ರೀತಿಯ ತೊಂದರೆ ಪರಿಹರಿಸಲು ಬೆರಳಿಗೂ ವ್ಯಾಯಾಮ ಮಾಡಿಸುತ್ತಾರೆ. ಬಾಲ್ ಎಸೆಯುವ ಆಟವಾಡಿಸುತ್ತಾರೆ. ಒಂದು, ಎರಡು ಹೇಳುತ್ತಾನೆ. ಅದನ್ನೇ ನಾಲ್ಕು ವಸ್ತು ಇಟ್ಟು ಎಣಿಸಲು ಹೇಳಿದರೆ ಗೊತ್ತಾಗುವುದಿಲ್ಲ. ಚಿಕ್ಕಪುಟ್ಟ ವಸ್ತುವನ್ನು ಮೇಲೆತ್ತುವ ಅವನ ಪ್ರಯತ್ನವನ್ನು ಗಮನಿಸಿ ತರಬೇತಿ ನೀಡುತ್ತಾರೆ. ವೈದ್ಯರು ವಾರದಲ್ಲಿ ಎರಡು ಮೂರು ಬಾರಿ ಶಾಲೆಗೆ ಬಂದು ಫಿಸಿಯೊಥೆರಪಿ ಮಾಡಿಸಿ ಅವನ ಬೆಳವಣಿಗೆ ಬಗ್ಗೆ ತಿಳಿಯುತ್ತಾರೆ.



ಅಕ್ಷರಾಭ್ಯಾಸವನ್ನೂ ರೂಢಿಸಿದ್ದಾರೆ. ಆದರೆ ಅವನಿಗೆ ನೆನಪು ಇರುವುದಿಲ್ಲ. ಅವನೇ ಮಾತಾಡಿದ ವಿಷಯ ಮರುಗಳಿಗೆ ನೆನಪಿರುವುದಿಲ್ಲ. ಆಗಲೇ ಮಾತಾಡಿದ್ದು ಏನು ಅಂದರೆ, ಗೊತ್ತಿಲ್ಲ. ಸುಮ್ಮನೆ ಹೇಳಿದೆ ಎಂದಷ್ಟೇ ಉತ್ತರಿಸುತ್ತಾನೆ. ಚಿಕ್ಕವನಿದ್ದಾಗ ಓಡಾಟ ಮತ್ತು ಮಾತಿನಲ್ಲಿ ಸಮಸ್ಯೆ ಇರಲಿಲ್ಲ. ಈಗ ಅವನಿಗೆ ನೀಡುತ್ತಿರುವ ಔಷಧೋಪಚಾರದ ಪ್ರಭಾವದಿಂದ ಮಾತಿನಲ್ಲಿ ತೊದಲುವಿಕೆ ಜಾಸ್ತಿ ಆಗಿದೆ. ನಡೆದಾಡಲು ಕೂಡ ಹಿಂಜರಿಕೆ ಇದೆ. ದಾರಿಯಲ್ಲಿ ಸಣ್ಣ ಕಡ್ಡಿ ಕಾಣಿಸಿದರೂ ಅದನ್ನು ದಾಟಲು ಕಾಲನ್ನು ಮೇಲೆ ಎತ್ತಿ ಇಡುತ್ತಾನೆ. ರಸ್ತೆಯಲ್ಲಿ ಯಾರಾದರೂ ಇದ್ದರೆ ಸರಿಯಾಗಿ ನಡೆಯಲ್ಲ. ಅವನೊಬ್ಬನೆ ಇದ್ದರೆ ಸಲೀಸಾಗಿ ನಡೆಯುತ್ತಾನೆ.

ನನ್ನ ಪತ್ನಿ ವಸಂತಾಗೆ ಹೊರ ಪ್ರಪಂಚವೇ ಇಲ್ಲ. ನಮ್ಮ ಅಪ್ಪ–ಅಮ್ಮ, ಅತ್ತೆ–ಮಾವನವರ ಮೇಲೆ ನಮ್ಮ ಮಗನ ಜವಾಬ್ದಾರಿ ಹೇರಲು ಆಗುವುದಿಲ್ಲ. ಆತ ಕೂಡ ನಮ್ಮಷ್ಟು ಚೆನ್ನಾಗಿ ಬೇರೆಯವರ ಜೊತೆ ಹೊಂದಿಕೊಳ್ಳುವುದಿಲ್ಲ. ಎಲ್ಲ ಸಂದರ್ಭದಲ್ಲೂ ಅವನ ಜೊತೆ ಒಬ್ಬರು ಇರಲೇಬೇಕು.

ಸಹಜ ಮಕ್ಕಳಿಗಿಂತ ಭಿನ್ನ ತೊಂದರೆಗಳು ಅವರಿಗೆ ಇರುತ್ತವೆ. ಮಗುವಿನ ಬೆಳವಣಿಗೆ ಸರಿಯಾಗಿ ಆಗುತ್ತಿಲ್ಲ ಎನ್ನುವುದು ಪೋಷಕರಿಗೆ ಸಹಜವಾಗಿ ಗೊತ್ತಾಗುತ್ತದೆ. ಕೂಡಲೇ ವೈದ್ಯರನ್ನು ಸಂಪರ್ಕಿಸುವುದಕ್ಕೆ ಆದ್ಯತೆಯನ್ನು ನೀಡಬೇಕು. ಅವರ ಸಲಹೆಯನ್ನು ಪಾಲಿಸಬೇಕಾಗುತ್ತದೆ. ಸಮಸ್ಯೆಯನ್ನು ನಾವು ಮಾಡಿಕೊಂಡಿದ್ದಲ್ಲ. ಆಘಾತವೂ ಅಲ್ಲ. ಸಹಜವಾಗಿ ಬಂದಿದೆ ಅದನ್ನು ಅನುಭವಿಸಬೇಕು. ಆಗಲೇ ಜೀವನ ಏನು ಅನ್ನುವುದು ಗೊತ್ತಾಗುವುದು. ಪಾಲನೆ ಕಷ್ಟ ಎಂದು ಹಾಸ್ಟೆಲ್– ವಸತಿ ಸಂಸ್ಥೆಗೆ ಸೇರಿಸಿ ಬರಬಹುದು. ಹೆತ್ತ ತಾಯಿ–ತಂದೆಯಾದ ನಾವೇ ನೋಡಿಕೊಳ್ಳಲಿಲ್ಲ ಎಂದರೆ ಮೂರನೆಯವರು ಎಷ್ಟು ಪ್ರೀತಿಯಿಂದ ನೋಡಿಕೊಳ್ಳುತ್ತಾರೆ ಎನ್ನುವ ಕಾಳಜಿ ವಿಶಾಲ್ ವಿಷಯದಲ್ಲಿ ನಮಗೆ ಇದೆ.

ಪ್ರತಿಕ್ರಿಯಿಸಿ: **feedback@sudha.co.in**

